**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 16.06.2026**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ನಾನು ಆ ದಿನ ಕಾಯಿ ವ್ಯಾಪಾರ ಮಾಡಲು ಶಾಂತಿನಗರಕ್ಕೆ ಹೋಗಿದ್ದೆನು. ನಾನು ಮತ್ತು ರಂಗೇಗೌಡರವರು ಸ್ಕೂಟರಿನಲ್ಲಿ ಹಾಸನ ಕಡೆಯಿಂದ ಶಾಂತಿನಗರದ ಕಡೆ ಹೋಗುತ್ತಿದ್ದೆನು. ಅಪಘಾತವಾಯಿತು ಎನ್ನಲಾದ ಕಾರು ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿತ್ತು. ಆ ಕಾರು ವೇಗವಾಗಿ ಬಂದು ರಸ್ತೆ ಮಧ್ಯೆ ಇದ್ದ ಡಿವೈಡರ್ ಗೆ ಹೊಡೆದು ಮಗುಚಿಕೊಂಡಿತು. ಅದರಲ್ಲಿ ಮೂರು ಜನ ಪ್ರಯಾಣಿಕರಿದ್ದರು. ನಾನು ಮತ್ತು ವಬೈಕಿನಲ್ಲಿ ಬೇರೆ ಹೋಗುತ್ತಿದ್ದ ಸಾರ್ವಜನಿಕರು ಎಲ್ಲರು ಹತ್ತಿರಕ್ಕೆ ಹೋಗಿ ನೋಡಿದೆವು. ನಾನು ಮತ್ತು ಸಾರ್ವಜನಿಕರು ಕಾರಿನಲ್ಲಿ ಇದ್ದವರನ್ನು ಹೊರ ತೆಗೆದು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳು ಹಿಸಿಕೊಟ್ಟೆವು. ರಸ್ತೆಯ ಡಿವೈಡರ್ ಗೆ ಡಿಕ್ಕಿ ಪಡಿಸಿಕೊಂಡು ರಸ್ತೆಯ ಎಡಭಾಗ ಅಂದರೆ ಬೆಂಗಳೂರು ಕಡೆಗೆ ಹೋಗುವ ರಸ್ತೆ ಕಡೆಗೆ ತಿರುಗಿ ಒಂದು ಟೋಯೋಟಾ ಕಾರಿಗೆ ಡಿಕ್ಕಿ ಪಡಿಸಿತು. ಅಪಘಾತವಾದ ದಿನವೇ ಪೊಲೀಸರು ಮಹಜರು ಮಾಡಿದರು. ನಾನು

*ಮಹಜರಿಗೆ ಸಹಿ ಮಾಡಿರುತ್ತೇನೆ. ನೀವು ಯಾವುದೇ ಹೇಳಿಕೆ ನೀಡದೆ ಇದ್ದರೂ ಸಹ ಸುಳ್ಳು ಸಾಕ್ಷಿ ಕೊಡಲು ಬಂದಿರುತ್ತೀರಾ ಎಂದರೆ ಸರಿಯಲ್ಲ.*

***1, 3 ಮತ್ತು 4 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಹಲವಾರು ಬಾರಿ ಕರೆಸಲಾಯಿತು. ಗೈರು ಹಾಜರು, 1, 3 ಮತ್ತು 4 ನೇ ಎದುರುದಾರರ ಪರ ವಕೀಲರು ಈ ಸಾಕ್ಷೀದಾರರನ್ನು ಪಾಟೀ ಸವಾಲು ಮಾಡಲಿಲ್ಲ ಎಂದು ತೆಗೆದುಕೊಳ್ಳಲಾಯಿತು.***

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆಎಂಎಫ್‌ಸಿ., ಪಾಂಡವಪುರ.***